1	2	3
	ಗೋಷ್ವಾರೆ	
1.	ಬೆಂಗಳೂರು ಪ್ರಾಂತ	51
2.	ಬೆಳಗಾಂ ಪ್ರಾಂತ	45
3.	ಮೈಸೂರು ಪ್ರಾಂತ	54
4.	ಗುಲ್ಬರ್ಗಾ ಪ್ರಾಂತ	31
	ಒಟ್ಟು	181

654(16) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ತಾಲ್ಲೂಕು ಕೃಷಿ ಅಭಿವೃದ್ಧಿ ಗ್ರಾಮೀಣ ಬ್ಯಾಂಕುಗಳು ಎಷ್ಟು ಹಾಗೂ ಯಾವುವು;

ಆ) ಈ ಪಿಕಾರ್ಡ್ ಬ್ಯಾಂಕುಗಳು ಕಳೆದ ಮೂರು ವರ್ಷಗಳಲ್ಲಿ ಗಳಿಸಿದ ಲಾಭ ಹಾಗೂ ಹಾನಿ ಎಷ್ಟು;

ಇ) ಈ ಬ್ಯಾಂಕುಗಳು 31-3-2004ಕ್ಕೆ ಗಳಿಸಿದ ಒಟ್ಟು ಲಾಭ ಅಥವಾ ಹಾನಿ ಎಷ್ಟು;

ಈ) ಈ ಬ್ಯಾಂಕುಗಳಿಗೆ 31-3-2004ಕ್ಕೆ ಸಾಲಗಾರರಿಂದ ಬರಬೇಕಾದ ಸಾಲ ಹಾಗೂ ಬಡ್ಡಿಯ ಮೊತ್ತವೆಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 177 ಸಹಕಾರಿ ಕೃಷಿ ಅಭಿವೃದ್ಧಿ ಗ್ರಾಮೀಣ ಬ್ಯಾಂಕುಗಳು ಇರುತ್ತವೆ.

ಆ)

ವರ್ಷ	ಲಾಭಗಳಿಸಿದ ಪಿಕಾರ್ಡ್ ಬ್ಯಾಂಕುಗಳು	ಒಟ್ಟು ಲಾಭದ ಮೊತ್ತ	ನಷ್ಟ ಹೊಂದಿದ ಒಟ್ಟು ಪಿಕಾರ್ಡ್ ಬ್ಯಾಂಕುಗಳು	ಒಟ್ಟು ನಷ್ಟದ ಮೊತ್ತ
2001-02	18	246.52	159	7586.70
2002-03	21	175.67	156	7206.15
2003-04	22	344.76	155	10356.60

ಇ) 31-3-2004ಕ್ಕೆ 10 ಬ್ಯಾಂಕುಗಳು ರೂ. 200.11 ಲಕ್ಷಗಳ ಲಾಭಗಳಿಸಿವೆ. ಉಳಿದ 167 ಬ್ಯಾಂಕುಗಳು ಒಟ್ಟು ರೂ. 58600.00 ಲಕ್ಷಗಳ ಹಾನಿ ಅನುಭವಿಸಿದೆ.

ಈ) 31-3-2004ಕ್ಕೆ ಸಾಲಗಾರರಿಂದ ಬರಬೇಕಾದ ಒಟ್ಟು ಸಾಲ ರೂ. 117246.00 ಲಕ್ಷ ಹಾಗೂ ಬಡ್ಡಿಯ ಮೊತ್ತ ರೂ. 25498.00 ಲಕ್ಷಗಳು.